1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

ಸಿ.ಸಿ.ಸಂಖ್ಯೆ:1098/2023

ಪಿರ್ಯಾದಿ : ಕವಲಂದೆ ಪೊಲೀಸರು

ವಿರುದ್ಧ

ಆರೋಪಿ : 1 ಸುಬ್ಬಮ್ಮ ಬಿನ್ ಲೇಟ್ ಕರಿಗೌಡ 47 ವರ್ಷ
2 ನಾಗಮ್ಮ ಕೋಂ ಮಲ್ಲೇಶ 50 45 ವರ್ಷ
3 ರುದ್ರೇಶ ಬಿನ್ ಮಲ್ಲೇಶ 21 ವರ್ಷ
4 ಮಂಜುನಾಥ ಬಿನ್ ಶಿವಣ್ಣ 32 ವರ್ಷ
ಎಲ್ಲರ ವಾಸಃ ತಗಡೂರು ಗ್ರಾಮ, ನಂಜನಗೂಡು ತಾ.

ದೋಷಾರೋಪಣೆ

ಶ್ರೀಮತಿ.ಸರಿತಾ ಕುಮಾರಿ.ಎ.ಎಂ, ಬಿ.ಎ.,ಎಲ್.ಎಲ್.ಬಿ., 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:-

ದಿನಾಂಕಃ 25.11.2021 ರಂದು ಸಂಜೆ 05.00 ಗಂಟೆ ಸಮಯದಲ್ಲಿ ಕವಲಂದೆ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ತಗಡೂರು ಗ್ರಾಮದಲ್ಲಿ ಆರೋಪಿತರು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಆರೋಪಿತರಾದ ನೀವು ಚಾಸಾ.1 ರವರ ಬಾಬ್ತು ಕೆಎ-09-ಟಿ-5527 ಟ್ರ್ಯಾಕ್ಟರ್ ಮತ್ತು ಕೆಎ-15-ಟಿ-3618 ಟ್ರೇಲರನಲ್ಲಿ ಜಮೀನನ್ನು ಉಳುಮೆ ಮಾಡಿಕೊಂಡು ವಾಪಸ್ಸು ತಂದುಕೊಡುತ್ತೇವೆಂದು ಚಾಸಾ.1 ರವರಿಗೆ ನಂಬಿಸಿ ತೆಗೆದುಕೊಂಡು ಹೋಗಿದ್ದು, ದಿಃ01.12.2021 ರಂದು ಆರೋಪಿತರಾದ ನೀವು ತೆಗೆದುಕೊಂಡು ಹೋಗಿದ್ದ ಟ್ರ್ಯಾಕ್ಟರ್ ಮತ್ತು ಟ್ರೇಲರನ್ನು ಚಾಸಾ.1 ರವರು ಕೇಳಲು ಹೋದಾಗ ಆರೋಪಿತರಾದ ನೀವು ಚಾಸಾ.1 ರವರನ್ನುದ್ದೇಶಿಸಿ ಟ್ರ್ಯಾಕ್ಟರ್ ಮತ್ತು ಟ್ರೇಲರ್ ನಮ್ಮ ಅಣ್ಣ ಲೇಟ್ ಬಸವೇಗೌಡ ರವರದು ಕತ್ತೆ ಮುಂಡೆ , ಸೂಳೆ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಉದ್ರೇಕವನ್ನುಂಟು ಮಾಡಿದರೆ

ಅಂತಹ ಉದ್ರೇಕದಿಂದ ಶಾಂತಿ ಭಂಗ ಮಾಡಲಿ ಅಥವಾ ಇತರೆ ಯಾವುದೇ ಅಪರಾಧ ಮಾಡಲಿ ಎನ್ನುವ ಉದ್ದೇಶದಿಂದ ಅವರನ್ನು ಅವಮಾನಿಸಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.504 ಸಹವಾಚಕ ಕಲಂ.34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೆಯದಾಗಿ , ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಆರೋಪಿತರಾದ ನೀವು ಚಾಸಾ.1 ರವರಿಗೆ ನಿನ್ನನ್ನು ಕೊಲೆ ಮಾಡುತ್ತೇವೆಂದು ಕೊಲೆ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆಯನ್ನು ಎಸಗಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.506 ಸಹವಾಚಕ ಕಲಂ.34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೆಯದಾಗಿ , ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರು ಅಪರಾಧವನ್ನು ಎಸಗುವ ಸಮಾನ ಉದ್ದೇಶವನ್ನು ಹೊಂದಿ, ಆರೋಪಿತರಾದ ನೀವು ಚಾಸಾ.1 ರವರಿಗೆ ಅವರ ಬಾಬ್ತು ಟ್ರ್ಯಾಕ್ಟರ್ ಮತ್ತು ಟ್ರೇಲರನ್ನು ನಂಬಿಸಿ ತೆಗೆದುಕೊಂಡು ಹೋಗಿ ಅವರಿಗೆ ವಾಪಸ್ಸು ನೀಡದೇ ಅವರನ್ನು ಅವಮಾನಿಸಿ ಅಪರಾಧಿಕ ನಂಬಿಕೆ ದ್ರೋಹವನ್ನು ಎಸಗಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.406 ಸಹವಾಚಕ ಕಲಂ.34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

(ಮೇಲ್ಕಂಡ ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಕೇಳಲಾಯಿತು. ಆರೋಪಿ ಕೊಟ್ಟ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನು ಒಳಗೊಂಡಿದೆ ಎಂದು ದಿನಾಂಕ 27.11.2025 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸಿರುತ್ತೇನೆ.)

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.

ನಂಜನಗೂಡು

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

<u>ಸಿ.ಸಿ.ಸಂಖ್ಯೆ:1098/2023</u>

ಪಿರ್ಯಾದಿ : ಕವಲಂದೆ ಪೊಲೀಸರು

ವಿರುದ್ಧ

ಆರೋಪಿ : 1 ಸುಬ್ಬಮ್ಮ ಬಿನ್ ಲೇಟ್ ಕರಿಗೌಡ 47 ವರ್ಷ

2 ನಾಗಮ್ಮ ಕೋಂ ಮಲ್ಲೇಶ 50 45 ವರ್ಷ

3 ರುದ್ರೇಶ ಬಿನ್ ಮಲ್ಲೇಶ 21 ವರ್ಷ

4 ಮಂಜುನಾಥ ಬಿನ್ ಶಿವಣ್ಣ 32 ವರ್ಷ

ಎಲ್ಲರ ವಾಸಃ ತಗಡೂರು ಗ್ರಾಮ, ನಂಜನಗೂಡು ತಾ.

ಃ ಆಪಾದನೆ ಃ

ಪ್ರಶ್ನೆಃ1- ಈ ಮೇಲೆ ಹೇಳಿದಂತೆ ನಿಮಗೆ ಓದಿ ಹೇಳಿ ವಿವರಿಸಿದ ಆಪಾದನೆಯನ್ನು ಅರ್ಥಮಾಡಿಕೊಂಡಿರುವಿರಾ?

1 ನೇ ಆರೋಪಿ ಉತ್ತರಃ

2 ನೇ ಆರೋಪಿ ಉತ್ತರಃ

3 ನೇ ಆರೋಪಿ ಉತ್ತರಃ

4 ನೇ ಆರೋಪಿ ಉತ್ತರಃ

ಪ್ರಶ್ನೆಃ2- ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೋ?

1 ನೇ ಆರೋಪಿ ಉತ್ತರಃ

2 ನೇ ಆರೋಪಿ ಉತ್ತರಃ

3 ನೇ ಆರೋಪಿ ಉತ್ತರಃ

4 ನೇ ಆರೋಪಿ ಉತ್ತರಃ

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸಲಾಗಿದೆ.

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.

**ನಂಜನಗೂಡು**